# ಸ್ವಾಮಿ ವಿವೇಕಾನಂದರು ಮತ್ತು ಶ್ರೀಮಾತೆಯವರ ದಿವ್ಯ ಸಂಬಂಧ



ಸ್ವಾಮಿ ರಾಘವೇಶಾನಂದ

ಶ್ರೀಮಾತೆ ಹಾಗೂ ಸ್ವಾಮೀಜಿ — ಇಬ್ಬರೂ ಅವತಾರವರಿಷ್ಠರಾದ ಶ್ರೀರಾಮಕೃಷ್ಣರ ಲೀಲಾಸಹಾಯಕರಾಗಿ ಧರೆಗೆ ಅವತರಿಸಿ ಬಂದ ಮಹಿಮಾನ್ವಿತರು. ಶ್ರೀಮಾತೆ ಜೀವಕೋಟಿಗಳ ಬದುಕನ್ನು ಆಂತರಿಕವಾಗಿ ಬೆಳಗಿದ ದಿವ್ಯ ಶಕ್ತಿಯಾಗಿದ್ದರೆ, ಸ್ವಾಮೀಜಿ ಜಗದ್ವ್ಯಾಪಕವಾಗಿ ಶ್ರೀರಾಮಕೃಷ್ಣರ ಸಂದೇಶವನ್ನು ಸಕಲ ಮಾನವರ ಬಳಿಗೊಯ್ದ ಮಹಾತ್ಮರು. ಇಬ್ಬರೂ ಒಂದೇ ಗುರುಗಳ ಗರಡಿಯಲ್ಲಿ ಪಳಗಿದವರು; ಆದರೂ ಸ್ವಾಮೀಜಿ ಶ್ರೀಮಾತೆಯವರನ್ನು ಜಗನ್ಮಾತೆಯೆಂದೇ ಆರಾಧಿಸಿದರು. ಈ ದಿವ್ಯ ಸಂಬಂಧವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಉದಕಮಂಡಲ ರಾಮಕೃಷ್ಣ ಮಠದ ಅಧ್ಯಕ್ಷರು. ಪೂಜ್ಯರು ಉತ್ತಮ ವಾಗ್ಮಿಗಳೂ, ಲೇಖಕರೂ ಆಗಿದ್ದಾರೆ.

ಶ್ರೀಮಾತೆ ಜಗತ್ತಿಗೇ ತಾಯಿ. ಸ್ವಾಮಿ ವಿವೇಕಾನಂದರ ಹಾಗೂ ಶ್ರೀಮಾತೆಯವರ ಸಂಬಂಧ ತಾಯಿ ಮಗುವಿನ ರೀತಿಯದಾದರೂ, ಸ್ವಾಮೀಜಿಗೆ ಶ್ರೀಮಾತೆಯ ಮೇಲಿನ ಪ್ರೀತಿ ಎಲ್ಲಾ ಬಾಂಧವ್ಯವನ್ನೂ ದಾಟಿ ದೈವಿಕವಾಗಿತ್ತು. ಅವರಿಬ್ಬರ ವ್ಯಕ್ತಿತ್ವ , ಜೀವನಶೈಲಿ, ನಡತೆ, ಅತ್ಯಂತ ಭಿನ್ನವಾಗಿದ್ದರೂ ಹಲವಾರು ವಿಷಯಗಳಲ್ಲಿ ಸಾಮ್ಯತೆ ಇತ್ತು. ಮೊದಲನೆಯದಾಗಿ, ಅವರಿಬ್ಬರ ಜೀವನದ ಉದ್ದೇಶ ಶ್ರೀರಾಮಕೃಷ್ಣರ ಆದರ್ಶಗಳನ್ನು, ಕಾರ್ಯಗಳನ್ನು ಅವರೇ ರೂಪಿಸಿದ ರೀತಿಯಲ್ಲಿ ಮುಂದುವರೆಸಿ ಜಗತ್ತಿಗೆ ಪೂರ್ಣ ಶ್ರೇಯಸ್ಸನ್ನು ತರುವಂಥದಾಗಿತ್ತು. ಎರಡನೆಯದಾಗಿ ಇಬ್ಬರೂ ಆಧ್ಯಾತ್ಮಿಕ ಸಾಧನೆಯ ತುತ್ತತುದಿಯನ್ನು ಮುಟ್ಟಿ ಬ್ರಹ್ಮಜ್ಞಾನಿಗಳಾಗಿದ್ದರು. ಮೂರನೆಯದಾಗಿ, ಶ್ರೀರಾಮಕೃಷ್ಣ ಮಹಾಸಂಘದ ಸ್ಥಾಪನೆಯಲ್ಲಿ ಹಾಗೂ ಅದರ ಬೆಳವಣಿಗೆಯಲ್ಲಿ ಅವರಿಬ್ಬರ ಮುಂದಾಳತ್ವದಲ್ಲಿ ಸಮಾನತೆ ಇತ್ತು. ಇದನ್ನೆಲ್ಲಾ ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಷ್ಟವಾದರೂ, ಭೌತಿಕ ನೆಲೆಯಲ್ಲಿ ಸ್ಥೂಲವಾಗಿ ನಮ್ಮ ಕಣ್ಣಿಗೆ ಎಟಕುವ ರೀತಿಯಲ್ಲಿ ಅವರ ಬಾಂಧವ್ಯವನ್ನು ಗುರುತಿಸಲು ಯತ್ನಿಸೋಣ.

ದಕ್ಷಿಣೇಶ್ವರದಲ್ಲಿ ಇವರಿಬ್ಬರ ಮುಖಾಮುಖಿ ಭೇಟಿ ಯಾವಾಗಲಾದರೂ ಆಗಿತ್ತೇ, ಇವರಿಬ್ಬರ ನಡುವೆ ಏನಾದರೂ ಮಾತುಕತೆ ಆಗಿತ್ತೇ ಎನ್ನುವುದರ ಉಲ್ಲೇಖ ಇವರಿಬ್ಬರ ಜೀವನ ಚರಿತ್ರೆಯ ಗ್ರಂಥದಲ್ಲಿ ಎಲ್ಲೂ ಕಂಡುಬರುವುದಿಲ್ಲ.

ಮುಂದೆ ಶ್ರೀಮಾತೆಯವರ ಸಂಭಾಷಣೆಯಲ್ಲಿ ನರೇಂದ್ರನ ಬಗ್ಗೆ ಮಾತುಕತೆ ಬಂದಾಗ ಅವರು, ''ನರೇಂದ್ರ ತುಂಬಾ ಸೊಗಸಾಗಿ ಹಾಡುತ್ತಿದ್ದ. ಅವನು ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಕುಳಿತು ಹಾಡುತ್ತಿದ್ದಾಗ ನಾನು ನಹಬತ್‌ನಿಂದ ಅನೇಕ ಬಾರಿ ಕೇಳಿದ್ದೇನೆ'' ಎಂದು ನೆನಪಿಸಿಕೊಳ್ಳುತ್ತಿದ್ದರು. ಒಂದು ದಿನ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರನ್ನು ನೋಡಲು ನರೇಂದ್ರ ಬಂದಿದ್ದಾಗ, ಶ್ರೀಮಾತೆ ನರೇಂದ್ರನಿಗಾಗಿ ಒಳ್ಳೆಯ ಚಪಾತಿ ಹಾಗೂ ಹೆಸರುಬೇಳೆಯ ತೊವ್ವೆ ಮಾಡಿದ್ದರು. ಶ್ರೀರಾಮಕೃಷ್ಣರು ನರೇಂದ್ರನನ್ನು, ''ಅಡಿಗೆ ಹೇಗಿತ್ತು?'' ಎಂದು ಕೇಳಿದರು. ಅದಕ್ಕೆ ನರೇಂದ್ರ ಹೇಳಿದ, ''ಅಡಿಗೆಯೇನೋ ಚೆನ್ನಾಗಿತ್ತು. ಆದರೆ ಒಬ್ಬ ರೋಗಿಗೆ ಕೊಡುವ ಪಥ್ಯದಂತಿತ್ತು'' ಎಂದನು. ಅದಕ್ಕೆ ತಕ್ಷಣ ಶ್ರೀರಾಮಕೃಷ್ಣರು ನಹಬತ್ತಿನಲ್ಲಿದ್ದ ಶ್ರೀಮಾತೆಗೆ ಕೇಳುವಂತೆ, ''ನರೇಂದ್ರನಿಗೆ ಇನ್ನು ಮೇಲೆ ದಪ್ಪನೆಯ ಚಪಾತಿ ಹಾಗೂ ಗಟ್ಟಿಯಾದ ಕಡಲೆ ಬೇಳೆಯ ಪಲ್ಯವನ್ನು ಮಾಡು'' ಎಂದರು. ಮುಂದಿನ ಬಾರಿ ಹಾಗೆ ಮಾಡಿದಾಗ ನರೇಂದ್ರ ಬಹಳ ಮೆಚ್ಚಿ ಚೆನ್ನಾಗಿ ಊಟ ಮಾಡಿದ. ಶ್ರೀರಾಮಕೃಷ್ಣರ ನಂತರ ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಔನ್ನತ್ಯವನ್ನು ಗುರುತಿಸಿದವರು ಶ್ರೀಮಾತೆಯವರು.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆಯವರು ಕಾಮಾರಪುಕುರದ ತಮ್ಮ ಪತಿಯ ಮನೆಯಲ್ಲಿ

ಏಕಾಂಗಿಯಾಗಿ ವಾಸಿಸುತ್ತಿದ್ದರು. ಆಗ ಅಲ್ಲಿ ಅವರಿಗೆ ಒಂದು ದಿನ ಒಂದು ದಿವ್ಯದರ್ಶನವಾಯಿತು. ಇದರಿಂದ ಸ್ವಾಮೀಜಿ ಮುಂದೆ ಮಾಡಬೇಕಾಗಿದ್ದ ಕಾರ್ಯದ ಅರಿವಾಯಿತು. ಆ ದರ್ಶನದಲ್ಲಿ ಅವರು ಶ್ರೀರಾಮಕೃಷ್ಣರು ಅವರ ಮನೆಯ ಕಡೆಗೆ ನಡೆದುಕೊಂಡು ಬರುತ್ತಿದ್ದುದನ್ನು ಕಂಡರು. ಅವರ ಹಿಂದೆಯೇ ನರೇಂದ್ರ, ರಾಖಾಲ, ಬಾಬುರಾಮ ಹಾಗೂ ಇನ್ನೂ ಅನೇಕ ಭಕ್ತರು ಕೂಡ ಬರುತ್ತಿದ್ದರು. ಹಾಗೆ ಬರುತ್ತಿದ್ದಂತೆಯೇ ಶ್ರೀರಾಮ ಕೃಷ್ಣರ ಪಾವನ ಪಾದಗಳಿಂದ ಗಂಗೆ ಹರಿದು ಬರುತ್ತಿತ್ತು. ಇದನ್ನು ಶ್ರೀಮಾತೆಯವರು ತಮ್ಮ ತೆರೆದ ಕಣ್ಣುಗಳಿಂದ ವೀಕ್ಷಿಸುತ್ತಿದ್ದರು. ಕೊನೆಗೆ ಶ್ರೀರಾಮಕೃಷ್ಣರು ನರೇಂದ್ರನ ದೇಹದಲ್ಲಿ ಲೀನರಾದರು. ಅಂದರೆ ಶ್ರೀರಾಮಕೃಷ್ಣರ ಮುಂದಿನ ಲೀಲಾಕಾರ್ಯ ನರೇಂದ್ರನ ಮೂಲಕ ನಡೆಯುತ್ತದೆ ಎಂಬುದರ ಸೂಚನೆಯೇ!

೧೮೯೩ನೆ ಇಸವಿಯಲ್ಲಿ ಒಮ್ಮೆ ಶ್ರೀಮಾತೆ ಬೇಲೂರಿನಲ್ಲಿರುವ ನೀಲಾಂಬರ ಮುಖರ್ಜಿಯ ಮನೆಯಲ್ಲಿ ವಾಸವಾಗಿದ್ದರು. ಅದೊಂದು ಹುಣ್ಣಿಮೆಯ ರಾತ್ರಿ ಎಲ್ಲೆಲ್ಲೂ ಹಾಲು ಬೆಳದಿಂಗಳು ಹರಡಿದೆ. ಶ್ರೀಮಾತೆಯವರು ಗಂಗೆಯ ಘಟ್ಟದ ಮೊದಲ ಮೆಟ್ಟಿಲ ಮೇಲೆ ಕುಳಿತು ಅದನ್ನು ಆಸ್ವಾದಿಸುತ್ತಿದ್ದರು. ಆಗ ಅವರಿಗೆ ಮತ್ತೊಂದು ಅನುಭವವಾಯಿತು. ಇದ್ದಕ್ಕಿದ್ದಂತೆ ಶ್ರೀರಾಮ ಕೃಷ್ಣರು ಪ್ರತ್ಯಕ್ಷರಾಗಿ ತಮ್ಮ ಹಿಂದಿನಿಂದ ಬಂದು ಮುನ್ನುಗ್ಗಿ ನದಿಯೊಳಗೆ ಇಳಿದರು. ಇಳಿದಿದ್ದೇ ತಡ, ಶ್ರೀರಾಮಕೃಷ್ಣರ ಜ್ಯೋತಿರ್ಮಯ ಶರೀರ ಆ ಪವಿತ್ರ ಗಂಗಾಜಲದಲ್ಲಿ ಕರಗಿ ಒಂದಾಯಿತು. ಆ ದೃಶ್ಯವನ್ನು ಕಂಡು ಶ್ರೀಮಾತೆ ರೋಮಾಂಚನಗೊಂಡರು. ಆಶ್ಚರ್ಯದಿಂದ ಅವಾಕ್ಕಾಗಿ ಆ ಗಂಗಾಜಲವನ್ನೇ ಕಣ್ಣು ಬಾಯಿ ತೆರೆದುಕೊಂಡು ನೋಡುತ್ತಾ ನಿಂತುಬಿಟ್ಟರು. ಆಗ ಮತ್ತೊಂದು ವಿಚಿತ್ರ ಸಂಭವಿಸಿತು, ಇದ್ದಕ್ಕಿದ್ದಂತೆ ಸ್ವಾಮಿ ವಿವೇಕಾನಂದರು ಎಲ್ಲಿಂದಲೋ ಬಂದು ಆವೇಶಭರಿತರಾಗಿ, 'ಜೈ ರಾಮಕೃಷ್ಣ! ಜೈ ರಾಮಕೃಷ್ಣ! ' ಎಂದು ಗಟ್ಟಿಯಾಗಿ ಉದ್ಘೋಷಿಸುತ್ತಾ ಸುತ್ತ ನೆರೆದಿದ್ದ ಸಹಸ್ರಾರು ಜನರ ಮೇಲೆ ಆ ಪವಿತ್ರ ಜಲವನ್ನು ಬೊಗಸೆ ಬೊಗಸೆಯಾಗಿ ಸಿಂಪಡಿಸಿದರು. ಆ ಪವಿತ್ರ ಜಲದ ಸಂಸ್ಪರ್ಶಕ್ಕೊಳಗಾದ ಜನರೆಲ್ಲಾ ಈ ಜಗತ್ತಿನಿಂದ ಮುಕ್ತರಾಗಿ ಹೋದರು. ಈ ಘಟನೆಯಿಂದ ಶ್ರೀಮಾತೆಗೆ ಸ್ಪಷ್ಟವಾದದ್ದೆಂದರೆ, ಶ್ರೀರಾಮಕೃಷ್ಣರು ತಮ್ಮ ಸ್ಥೂಲದೇಹ ತ್ಯಾಗ ಮಾಡಿದ್ದರೂ ಅವರು ತಮ್ಮ ಸೂಕ್ಷ್ಮದೇಹದಲ್ಲಿ ಜೀವಂತವಾಗಿದ್ದಾರೆ ಮತ್ತು ನರೇಂದ್ರನ ದೇಹದ ಮೂಲಕ ತಮ್ಮ ಕಾರ್ಯ ಮುಂದುವರಿಸುತ್ತಿದ್ದಾರೆ ಎಂದು.

ಶ್ರೀರಾಮಕೃಷ್ಣರ ಸಂದೇಶಗಳನ್ನು ಪ್ರಚಾರ ಮಾಡುವ ಜವಾಬ್ದಾರಿಯುತ ಕಾರ್ಯ ಈ ಇಬ್ಬರು ಪ್ರಮುಖ ವ್ಯಕ್ತಿಗಳ ಮೇಲೆ ಹೊರಿಸಲ್ಪಟ್ಟಿತು. ಶ್ರೀರಾಮಕೃಷ್ಣರ ಜೀವನ ಹಾಗೂ ಅವರ ಸಂದೇಶಗಳನ್ನು ತಮ್ಮ ಆಚರಣೆಯಲ್ಲಿ ತೋರಿಸುತ್ತಿದ್ದ ಶ್ರೀಮಾತೆ, ಹಾಗೂ ಅವರ ಸಂದೇಶಗಳನ್ನು ಶಕ್ತಿಯುತವಾಗಿ ಪ್ರಚಾರ ಮಾಡಬಲ್ಲ ಸ್ವಾಮಿ ವಿವೇಕಾನಂದರು — ಇವರೇ ಆ ಇಬ್ಬರು. ಅವರಿಬ್ಬರ ಪಥ ಬೇರೆ ಬೇರೆಯದಾಗಿದ್ದರೂ ಒಬ್ಬರ ಪಥಕ್ಕಿಂತ ಮತ್ತೊಬ್ಬರದು ಪೂರ್ಣ ಭಿನ್ನವಾಗಿರಲಿಲ್ಲ.

೧೮೯೦ರಲ್ಲಿ ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಹಿಮಾಲಯಕ್ಕೆ ಹೋಗಿ ಘೋರ ತಪಸ್ಸನ್ನು ಮಾಡಲು ತೀರ್ಮಾನಿಸಿದರು. ಆಗ ಅವರು ಬಾರಾನಗರ ಮಠದಲ್ಲಿದ್ದರು. ಅವರು ಅಲ್ಲಿದ್ದ ತಮ್ಮ ಸೋದರ ಶಿಷ್ಯರಿಗೆ, ಅವರಾರೂ ತಮ್ಮನ್ನು ಹಿಂಬಾಲಿಸಬಾರದೆಂದು ಕಠೋರ ಆಜ್ಞೆಯನ್ನಿತ್ತರು. ಹೋಗುವ ಮುನ್ನ ಒಮ್ಮೆ ಶ್ರೀಮಾತೆಯವರನ್ನು ಭೇಟಿಮಾಡಿ ಅವರ ಆಶೀರ್ವಾದವನ್ನು ಪಡೆಯಬೇಕೆಂದು ಅವರಿಗೆ ಬಯಕೆಯುಂಟಾಯಿತು. ಆದರೆ ಅವರ ಬಳಿಗೆ ಒಬ್ಬರೇ ಹೋಗಲು ಧೈರ್ಯವುಂಟಾಗಲಿಲ್ಲ. ಸ್ವಾಮಿ ಅಖಂಡಾನಂದರನ್ನೂ ಬರಲು ಹೇಳಿದರು. ಆದರೆ ಅಖಂಡಾನಂದರು ಒಂದು ನಿಬಂಧನೆ ಹಾಕಿದರು. ಅದೆಂದರೆ ಹಿಮಾಲಯಕ್ಕೆ ಅವರನ್ನೂ ಜೊತೆಗೆ ಕರೆದುಕೊಂಡು ಹೋಗಬೇಕು. ಕೊನೆಗೆ ವಿಧಿಯಿಲ್ಲದೆ ಆ ಶರತ್ತಿಗೆ ಒಪ್ಪಿಕೊಳ್ಳಬೇಕಾಯಿತು. ಆಗ ಶ್ರೀಮಾತೆಯವರು ಗಂಗೆಯ ಮತ್ತೊಂದು ತೀರದಲ್ಲಿದ್ದ ಘೂಸುರಿ ಎಂಬ ಹಳ್ಳಿಯಲ್ಲಿ, ಒಂದು ಸ್ಮಶಾನದ ಪಕ್ಕದಲ್ಲಿದ್ದ ಒಂದು ಮನೆಯಲ್ಲಿ ವಾಸಿಸುತ್ತಿದ್ದರು.

ಬಹುಶಃ ಸ್ವಾಮೀಜಿ ಹಾಗೂ ಶ್ರೀಮಾತೆಯವರ ಮುಖಾಮುಖಿ ಪ್ರಥಮ ಭೇಟಿ ಇದು. ಸ್ವಾಮೀಜಿ ಹಾಗೂ ಅಖಂಡಾನಂದರು ಅಲ್ಲಿಗೆ ಹೋದಾಗ ಶ್ರೀಮಾತೆಯವರು ತಮ್ಮ ಪದ್ಧತಿಯಂತೆ ತಲೆಯಿಂದ ಕಾಲಿನವರೆಗೆ ಬಿಳಿಯ ಬಟ್ಟೆಯಿಂದ ಮುಚ್ಚಿಕೊಂಡಿದ್ದರು. ಇಬ್ಬರೂ ಶ್ರೀಮಾತೆಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಶ್ರೀಮಾತೆಯವರ ಇಚ್ಛೆಯ ಮೇರೆಗೆ ಸ್ವಾಮೀಜಿ ಕೆಲವು ಹಾಡುಗಳನ್ನು ಹಾಡಿದರು. ಕುಶಲ ಸಮಾಚಾರವಾದ ನಂತರ ಸ್ವಾಮೀಜಿ ಮತ್ತೆ ನಮಸ್ಕಾರ ಮಾಡಿ ಹೇಳಿದರು, ''ಅಮ್ಮಾ, ನಾನು ಹಿಮಾಲಯಕ್ಕೆ ತೆರಳುತ್ತಿದ್ದೇನೆ. ನಾನು ನಿಜವಾದ ಅರ್ಥದಲ್ಲಿ ಮನುಷ್ಯನಾಗುವವರೆಗೆ (ಅಂದರೆ ಬ್ರಹ್ಮಜ್ಞಾನ ಪಡೆಯುವವರೆಗೆ) ಹಿಂದಿರುಗುವುದಿಲ್ಲ.'' ಅದನ್ನು ಕೇಳಿ ಬೆಚ್ಚಿದ ಶ್ರೀಮಾತೆ ತಮ್ಮ ಮುಸುಕು ತೆಗೆದು ನೇರವಾಗಿ ನೋಡುತ್ತಾ, ''ಏನು ಹೇಳುತ್ತಿದ್ದೀ ನರೇನ್?'' ಎಂದರು. ಆಗ ತಕ್ಷಣ ಸ್ವಾಮೀಜಿ, ''ಇಲ್ಲ ಅಮ್ಮ, ಬೇಗ ಹಿಂದಿರುಗುತ್ತೇನೆ'' ಎಂದರು. ಶ್ರೀಮಾತೆ ಸ್ವಾಮೀಜಿಯವರನ್ನು ಹೃತ್ಪೂರ್ವಕವಾಗಿ ಆಶೀರ್ವದಿಸಿ ಹೇಳಿದರು, ''ನರೇನ್, ಹೋಗುವ ಮುನ್ನ ನಿನ್ನ ಮನೆಗೆ ಹೋಗಿ ನಿನ್ನ ತಾಯಿಯ ಆಶೀರ್ವಾದವನ್ನು ಪಡೆದು ಹೋಗು.'' ಅದಕ್ಕೆ ಸ್ವಾಮೀಜಿ, ''ಜಗತ್ತಿನಲ್ಲಿ ನೀವೊಬ್ಬರೇ ತಾಯಿ'' ಎಂದರು. ಶ್ರೀಮಾತೆಯವರು ಮನಃಪೂರ್ವಕವಾಗಿ ಇಬ್ಬರನ್ನೂ ಹರಸಿದರು. ಇಬ್ಬರೂ ಶ್ರೀಮಾತೆಯಿಂದ ಬೀಳ್ಕೊಂಡು ಕೆಲವು ಹೆಜ್ಜೆ ಹೋದ ಮೇಲೆ ಶ್ರೀಮಾತೆ ಅಖಂಡಾನಂದರನ್ನು ಹಿಂದಕ್ಕೆ ಕರೆದು, ''ನೋಡು, ನನ್ನ ಸರ್ವಸ್ವವನ್ನೂ ನಿನಗೆ ಒಪ್ಪಿಸು

ತ್ತಿದ್ದೇನೆ. ಅವನನ್ನು ನೆರಳಿನಂತೆ ಅನುಸರಿಸು. ನಿನಗೆ ಹಿಮಾಲಯದ ಪರಿಸ್ಥಿತಿಯೆಲ್ಲಾ ಗೊತ್ತು. ನರೇಂದ್ರ ಆಹಾರಕ್ಕಾಗಿ ಅಲೆದಾಡಿ ಕಷ್ಟ ಪಡದಂತೆ ನೋಡಿಕೋ'' ಎಂದರು.

ಇಲ್ಲಿ ಗಮನಿಸಬೇಕಾದದ್ದು ಅವರಿಬ್ಬರ ದಿವ್ಯಬಾಂಧವ್ಯ. ನರೇಂದ್ರನಿಗೆ ಶ್ರೀಮಾತೆಯೊಬ್ಬರೇ ನಿಜವಾದ ತಾಯಿಯಾಗಿದ್ದರೆ, ಶ್ರೀಮಾತೆಗೆ ನರೇಂದ್ರ ಅವರ ಸರ್ವಸ್ವವಾಗಿದ್ದ.

ಹಿಂದೊಮ್ಮೆ ೧೮೯೦ರ ಏಪ್ರಿಲ್ ೨೩ರಂದು ಬಲರಾಮ ಬೋಸ್ ಎನ್ನುವ ಗೃಹೀಭಕ್ತನ ಮನೆಯಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರೆಲ್ಲ ಸೇರಿ ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಮಾತಿನ ಮಧ್ಯೆ ಸ್ವಾಮೀಜಿ ಹೇಳಿದರು, ''ಗುರುದೇವರು ನನಗೆ ಹಲವಾರು ವಿಷಯಗಳನ್ನು ತಿಳಿಸಿದರು. ಆದರೆ ಶ್ರೀಮಾತೆಯವರ ಬಗ್ಗೆ ಏನೂ ಹೇಳಲಿಲ್ಲ.'' ತಕ್ಷಣವೇ ಅಲ್ಲಿದ್ದ ಸ್ವಾಮಿ ಯೋಗಾನಂದರು ಹೇಳಿದರು, ''ಹೇಳುವುದಕ್ಕೇನಿದೆ? ಶ್ರೀರಾಮಕೃಷ್ಣರು ಈಶ್ವರನಾದರೆ ಶ್ರೀಮಾತೆ ಸಾಕ್ಷಾತ್ ಈಶ್ವರಿ.'' ಈ ಉತ್ತರ ಕೇಳಿ ಸ್ವಾಮೀಜಿ ಸಮಾಧಾನದ ನಿಟ್ಟುಸಿರು ಬಿಟ್ಟರು. ತನ್ನ ಸೋದರ ಶಿಷ್ಯ ಮಹಾಮಾತೆಯ ಬಗ್ಗೆ ಯಾವ ಭಾವನೆ ತಾಳಿರಬಹುದು ಎಂಬ ಸಂಶಯ ಅವರ ಮನಸ್ಸಿನಿಂದ ನಿವಾರಣೆಯಾಯಿತು. ಶ್ರೀರಾಮಕೃಷ್ಣರೇ ಹೇಳುವಂತೆ ಒಬ್ಬ ರತ್ನದ ವ್ಯಾಪಾರಿಗಷ್ಟೇ ರತ್ನದ ನಿಜವಾದ ಬೆಲೆ ಅರ್ಥವಾಗುವುದು. ಅಷ್ಟು ಮಾತ್ರವಲ್ಲ, ಇದು ಇನ್ನೂ ಒಂದು ಅಂಶವನ್ನು ಸ್ಪಷ್ಟಪಡಿಸುತ್ತದೆ. ಶ್ರೀರಾಮಕೃಷ್ಣರು ಯಾರ ಮೇಲೂ ಶ್ರೀಮಾತೆಯ ದೈವತ್ವವನ್ನು ಹೇರಿರಲಿಲ್ಲ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರು 'ಗುರುಪತ್ನಿಯನ್ನು ಗುರುವಂತೆ ಪೂಜಿಸಬೇಕು' ಎಂಬ ಭಾವನೆಯಿಂದ ಮಾತ್ರ ಶ್ರೀಮಾತೆಯವರಿಗೆ ಗೌರವ ಸಲ್ಲಿಸುತ್ತಿರಲಿಲ್ಲ; ಅವರ ದೈವತ್ವವನ್ನು ಅವರೆಲ್ಲರೂ ತಮ್ಮ ಸಾಧನೆಯಿಂದ ಸಾಕ್ಷಾತ್ಕರಿಸಿಕೊಂಡಿದ್ದರು.

ತಮ್ಮ ಕೊನೆಯ ದಿನಗಳಲ್ಲಿ ಒಂದು ದಿನ ಶ್ರೀರಾಮಕೃಷ್ಣರು ಶ್ರೀಮಾತೆಗೆ, ತಾವು ದೇಹತ್ಯಾಗ ಮಾಡಿದ ಮೇಲೆ ಹೇಗೆ ಬಾಳಬೇಕು ಎನ್ನುವುದರ ಬಗ್ಗೆ ಹೇಳಿದರು, ''ನೋಡು, ನಾನು ಹೋದ ಮೇಲೆ ನೀನು ಯಾವುದಕ್ಕೂ ಚಿಂತಿಸಬೇಡ. ನೀನು ಈಗ ಹೇಗೆ ಬಾಳುತ್ತಿದ್ದೀಯೋ ಹಾಗೇ ಬಾಳು. ಈ ಶಿಷ್ಯರು ನನ್ನನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೋ ಹಾಗೆಯೇ ನಿನ್ನನ್ನೂ ನೋಡಿಕೊಳ್ಳುತ್ತಾರೆ.'' ಆದರೆ ಅದಕ್ಕೆ ಶ್ರೀಮಾತೆ ಬಹಳ ದಿನ ಕಾಯಬೇಕಾಯಿತು. ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ದಕ್ಷಿಣೇಶ್ವರದ ಕಾಳೀದೇವಾಲಯದ ಅಧಿಕಾರಿಗಳು ಶ್ರೀರಾಮಕೃಷ್ಣರಿಗೆ ಕೊಡುತ್ತಿದ್ದ ಏಳು ರೂಪಾಯಿಗಳನ್ನು ಶ್ರೀಮಾತೆಗೆ ತಿಂಗಳ ನಂತರ ನಿಲ್ಲಿಸಿಬಿಟ್ಟರು. ಇದನ್ನು ತಿಳಿದ ಸ್ವಾಮೀಜಿ ಅಧಿಕಾರಿಗಳೊಡನೆ ಇದಕ್ಕಾಗಿ ಬಹಳ ಹೋರಾಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಆದರೆ ಶ್ರೀಮಾತೆಯವರ ಭದ್ರತೆಗಾಗಿ ಯಾವಾಗಲೂ ಸ್ವಾಮೀಜಿ ಬಹಳ ಚಿಂತಿತರಾಗಿದ್ದರು.

ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನಕ್ಕೆ ಹೋಗಬೇಕೋ ಬೇಡವೋ ಎಂಬ ದ್ವಂದ್ವದಲ್ಲಿ ಸಿಲುಕಿ, ನಿರ್ಧಾರ ಮಾಡಲು ಅಶಕ್ಯರಾಗಿದ್ದಾಗ ಅವರಿಗೊಂದು ಅಪೂರ್ವ ದರ್ಶನವಾಯಿತು. ಒಂದು ದಿನ ಅವರು ಒರಗಿಕೊಂಡು ಅರ್ಧ ನಿದ್ರೆಯಲ್ಲಿದ್ದಾಗ ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರ ಜ್ಯೋತಿರ್ಮಯ ರೂಪವನ್ನು ಕಂಡರು. ಅವರು ಸಮುದ್ರದ ದಡದಿಂದ ಮುನ್ನಡೆದು, ಅಲೆಗಳ ಮೇಲೆ ನಡೆದು ಹೋಗುತ್ತಾ ತಮ್ಮನ್ನು ಅನುಸರಿಸಿ ಬರುವಂತೆ ಸ್ವಾಮೀಜಿಯನ್ನು ಕೈಬೀಸಿ ಕರೆಯುತ್ತಿದ್ದರು. ಆ ದೃಶ್ಯವನ್ನು ಕಂಡ ಸ್ವಾಮೀಜಿಯ ಮೈಮನಗಳು ಅಪೂರ್ವ ಶಾಂತಿ ಆನಂದಗಳಿಂದ ತುಂಬಿಹೋದವು. ತಕ್ಷಣ ಅವರು ಎಚ್ಚೆತ್ತು ಕುಳಿತರು. ಆದೇಶ ಸ್ಪಷ್ಟವಾಗಿತ್ತು. ಇದು ದೈವೇಚ್ಛೆಯೇ ಸರಿ ಎಂದು ಅವರಿಗೆ ದೃಢವಾಯಿತು.

ಆದರೂ ಅವರು ಶ್ರೀಮಾತೆ ಒಪ್ಪಿಕೊಂಡು ಆಶೀರ್ವಾದ ಮಾಡಿದರೆ ಮಾತ್ರ ಹೋಗುವುದೆಂದು ತೀರ್ಮಾನಿಸಿದರು. ಅದಕ್ಕನುಸಾರವಾಗಿ ತಮ್ಮನ್ನು ಹರಸುವಂತೆ ಬೇಡಿಕೊಂಡು ಶ್ರೀಮಾತೆಯವರಿಗೆ ಒಂದು ಪತ್ರ ಬರೆದರು. ಈ ಪತ್ರವನ್ನು ಕಂಡು ಶ್ರೀಮಾತೆಯವರಿಗೆ ಅತೀವ ಆನಂದವಾಯಿತು. ಎಷ್ಟೋ ಕಾಲದ ಮೇಲೆ ತಮ್ಮ ಪ್ರೀತಿಯ ನರೇಂದ್ರನ ಕ್ಷೇಮ ಸಮಾಚಾರ ಮತ್ತು ಆತನು ದೂರದೇಶಗಳಿಗೆ ಧರ್ಮಪ್ರಚಾರಕ್ಕಾಗಿ ಹೊರಟಿರುವ ವಿಷಯ ತಿಳಿದು ಅವರಿಗೆ ಆನಂದವಾಯಿತು. ತಮ್ಮ ಮಗನನ್ನು ಸಮುದ್ರದಾಚೆಗಿನ, ಅಷ್ಟು ದೂರದ ನಾಡಿಗೆ ಕಳುಹಿಸಿ ಕೊಡಲು ಮೊದಮೊದಲು ಅವರ ಮಾತೃಹೃದಯ ಒಪ್ಪಲಿಲ್ಲ. ಆದರೆ ಶ್ರೀಮಾತೆಯವರಿಗೂ ಸ್ವಾಮೀಜಿಗೆ ಆದ ದರ್ಶನವೇ ಆಗಿತ್ತು. ಅನಂತರ ನಿರಾಳವಾಗಿ ಅವರಿಗೆ ಹೋಗಲು ಅಪ್ಪಣೆಯಿತ್ತು, ಆಶೀರ್ವದಿಸಿ ಪತ್ರ ಬರೆದರು. ಶ್ರೀಮಾತೆಯವರ ಪತ್ರವನ್ನು ಓದಿದ ಸ್ವಾಮೀಜಿ ಆನಂದಾತಿಶಯದಿಂದ ಕುಣಿದಾಡಿದರು. ಭಾವವುಮ್ಮಳಿಸಿ ಬಂದು ಆನಂದದಿಂದ ಅತ್ತುಬಿಟ್ಟರು. ಬಳಿಕ ತಮ್ಮ ಭಾವಾವೇಶವನ್ನು ಮುಚ್ಚಿಕೊಳ್ಳಲು ಕೋಣೆಯನ್ನು ಸೇರಿಕೊಂಡರು. ಆಗ ಅವರು ತಮ್ಮಷ್ಟಕ್ಕೇ ಹೇಳಿಕೊಂಡರು, ''ಆಹ, ಈಗ ಎಲ್ಲ ಸರಿಹೋಯಿತು. ಇದೆಲ್ಲವೂ ತಾಯಿಯ ಇಚ್ಛೆಯೇ!''

ಅಮೆರಿಕಾ ತಲುಪಿದ ಮೇಲೆ ಶ್ರೀಮಾತೆಯ ಆಶೀರ್ವಾದವನ್ನು ನೆನೆಸಿಕೊಳ್ಳುತ್ತಾ ತಮ್ಮ ಸೋದರ ಶಿಷ್ಯರಾದ ಸ್ವಾಮಿ ಶಿವಾನಂದರಿಗೆ ಒಂದು ಪತ್ರದಲ್ಲಿ ಸ್ವಾಮೀಜಿ ಬರೆಯುತ್ತಾರೆ, ''ನಾನು ಅಮೆರಿಕಾ ದೇಶಕ್ಕೆ ಬರುವ ಮುನ್ನ ನನ್ನನ್ನು ಆಶೀರ್ವದಿಸಬೇಕೆಂದು ಶ್ರೀಮಾತೆಗೆ ಒಂದು ಪತ್ರವನ್ನು ಬರೆದೆ. ಅವರೇನಾದರೂ ಆಜ್ಞೆಮಾಡಿದರೆ ಅವರ ಭೂತಗಣಗಳು ಏನನ್ನಾದರೂ ಸಾಧಿಸಿಬಿಡಬಲ್ಲವು. ಕೊನೆಗೂ ಅವರ ಆಶೀರ್ವಾದದ ಪತ್ರ ಬಂತು. ಒಂದೇ ನೆಗೆತಕ್ಕೆ ಸಮುದ್ರವನ್ನು ದಾಟಿದೆ.''

ಅಮೆರಿಕಾ ದೇಶದಲ್ಲಿ ಪ್ರಖ್ಯಾತರಾಗಿ ಜನ ಅವರನ್ನು ಸದಾ ಮುತ್ತುತ್ತಿದ್ದ ಸಮಯದಲ್ಲಿ ಸ್ವಾಮಿ ವಿವೇಕಾನಂದರು ಶ್ರೀಮಾತೆ

ಯವರನ್ನು ಮರೆಯಲಿಲ್ಲ. ಸ್ವಾಮೀಜಿಯನ್ನು ಕಾಪಾಡುತ್ತಿದ್ದ ಶ್ರೀಮಾತೆಯವರ ಅಭಯಹಸ್ತ ಸದಾ ಅವರ ಮನಸ್ಸಿನಲ್ಲಿ ತುಂಬಿತ್ತು. ೧೮೯೫ ಜುಲೈ ೧ ರಂದು ಥೌಸೆಂಡ್ ಐಲೆಂಡ್ ಪಾರ್ಕ್‌ನಲ್ಲಿ ಕೆಲವು ಮಂದಿ ಆಧ್ಯಾತ್ಮಿಕ ಪಿಪಾಸುಗಳಿಗೆ ತರಬೇತಿ ನೀಡುತ್ತಿದ್ದ ಸಮಯದಲ್ಲಿ ಮೊದಲ ಬಾರಿಗೆ ಶ್ರೀಮಾತೆಯ ಬಗ್ಗೆ ಹೊರ ಜಗತ್ತಿಗೆ ಹೇಳಿದರು, ''ಶ್ರೀಶಾರದಾದೇವಿ ಒಬ್ಬ ದೊಡ್ಡವ್ಯಕ್ತಿ, ಶುದ್ಧ ಪವಿತ್ರ ಮೂರ್ತಿ, ಅವರು ಸದಾ ತಮ್ಮ ಪತಿಯ ಕಾರ್ಯಕ್ಕೆ ಸಹಾಯಕರಾಗಿದ್ದರೇ ಹೊರತು, ಅವರನ್ನು ಗೃಹಸ್ಥ ಜೀವನಕ್ಕೆ ಎಳೆಯಲು ಯತ್ನಿಸಲಿಲ್ಲ.'' ೨೪ನೆಯ ೧೮೯೬ರಲ್ಲಿ ನ್ಯೂಯಾರ್ಕ್‌ನಲ್ಲಿ 'ನನ್ನ ಗುರುದೇವ' ಎಂಬ ಪ್ರವಚನದಲ್ಲೂ ಶೀಮಾತೆಯ ಬಗ್ಗೆ, ''ಅವರೊಬ್ಬರು ಅತ್ಯಂತ ಪವಿತ್ರ ವ್ಯಕ್ತಿಯಾಗಿದ್ದರು. ತಮ್ಮ ಪತಿಯ ಆಕಾಂಕ್ಷೆಗಳನ್ನು, ಧ್ಯೇಯವನ್ನು ಅರ್ಥ ಮಾಡಿಕೊಂಡು ಅವರಿಗೆ ಸಹಾಯಕರಾಗಿ ನಿಂತಿದ್ದರು'' ಎಂದರು. ಮತ್ತೊಮ್ಮೆ 'ನನ್ನ ಜೀವನ ಮತ್ತು ಧ್ಯೇಯ' ಎಂಬ ಪ್ರವಚನದಲ್ಲಿ ಹೇಳುತ್ತಾರೆ, ''ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ನನಗೂ ನನ್ನ ಸೋದರ ಸನ್ಯಾಸಿಗಳಿಗೂ ಕಠಿಣ ಸಮಯ ಒದಗಿ ಬಂತು... ಈ ಬಾಲಕರ ಮಾತುಗಳಿಗೆ ಅನುಕಂಪ ಸೂಚಿಸುವರು ಯಾರೂ ಇರಲಿಲ್ಲ, ಒಬ್ಬರನ್ನು ಬಿಟ್ಟು. ಆ ಒಬ್ಬರ ಅನುಕಂಪೆ ನಮಗೆ ಅನುಗ್ರಹ ಹಾಗೂ ಆಸೆಯನ್ನು ತಂದಿತು. ಅವರೊಬ್ಬರು ಸ್ತ್ರೀ... ಆದರೆ ಅವರು ಆಗ ದುರ್ಬಲರಾಗಿದ್ದರು. ಕಾರಣ ಅವರು ನಮಗಿಂತ ಬಡವರಾಗಿದ್ದರು.''

ರಾಮಕೃಷ್ಣ ಸಂಘದ ಸ್ಥಾಪನೆಯ ಮೊದಲ ದಿನದಿಂದ, 'ಶ್ರೀಮಾತೆಯವರು ಪ್ರೀತಿಯಿಂದ ಈ ಸಂಘದ ಬೆಳವಣಿಗೆಯನ್ನು ಗಮನಿಸುತ್ತಿದ್ದಾರೆ' ಎಂದು ಸ್ವಾಮಿ ವಿವೇಕಾನಂದರು ತಮ್ಮ ಹೃದಯಾಂತರಾಳದಿಂದ ತಿಳಿದಿದ್ದರು. ಸ್ವಾಮೀಜಿ ಶ್ರೀಮಾತೆಯವರನ್ನು 'ಸಂಘಜನನಿ' ಎಂದು ಭಾವಿಸಿದ್ದರು.

ಶ್ರೀಮಾತೆಯವರು ತನ್ನ ಕಂದ ವಿವೇಕಾನಂದರ ಮೇಲೆ ವಿಶೇಷ ಪ್ರೀತಿ ಇಟ್ಟಿದ್ದರು. ನರೇಂದ್ರನು ಶ್ರೀರಾಮಕೃಷ್ಣರಿಂದ ಆರಿಸಲ್ಪಟ್ಟ ವಿಶೇಷ ವ್ಯಕ್ತಿ ಎಂದು ಅವರಿಗೆ ಗೊತ್ತಿತ್ತು. ಒಂದು ದಿನ ನರೇಂದ್ರನ ಒಂದು ಪತ್ರವನ್ನು ಓದಿದಾಗ, ಅವರು ಹೇಳಿದರು, ''ನರೇಂದ್ರನು ಶ್ರೀರಾಮಕೃಷ್ಣರ ಯಂತ್ರ. ಅವರೇ ಅವನಿಂದ ಈ ಶಕ್ತಿಯುತ ಮಾತುಗಳನ್ನು ಬರೆಸುತ್ತಿರುವುದು. ಈ ಮಾತುಗಳು ಯುವಕರಿಗೆ ಶ್ರೀರಾಮಕೃಷ್ಣರ ಕೆಲಸವನ್ನು ಮಾಡುವಂತೆ ಪ್ರೋತ್ಸಾಹಿಸುತ್ತದೆ. ನರೇಂದ್ರ, ಬರೆಯುವ ಮಾತುಗಳೆಲ್ಲ ಸತ್ಯ. ಕಾಲಕ್ರಮದಲ್ಲಿ ಅವುಗಳೆಲ್ಲ ಫಲಕಾರಿಯಾಗುತ್ತವೆ.''

ಸ್ವಾಮಿ ವಿವೇಕಾನಂದರಿಗಂತೂ ಶ್ರೀಮಾತೆಯವರು ಜೀವಂತ ದುರ್ಗೆಯಾಗಿದ್ದರು. ೧೮೯೪ರಲ್ಲಿ ಸ್ವಾಮೀಜಿ ಅಮೆರಿಕಾದಿಂದ ಸ್ವಾಮಿ ಶಿವಾನಂದರಿಗೆ ಹೀಗೆ ಬರೆಯುತ್ತಾರೆ: ''ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ. ಇತರ ಎಲ್ಲಾ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರ ದುರ್ಬಲಗೊಂಡಿದೆಯಲ್ಲ, ಹಿಂದುಳಿದಿದೆಯಲ್ಲ— ಏಕೆ? ಏಕೆಂದರೆ ಇಲ್ಲಿ ಆದ್ಯಾಶಕ್ತಿಯನ್ನು ಅವಮಾನಿಸಲಾಗಿದೆ. ಈ ಅದ್ಭುತ ಶಕ್ತಿಯನ್ನು ಜಾಗೃತಗೊಳಿಸುವುದಕ್ಕಾಗಿಯೇ ಶ್ರೀಮಾತೆಯವರು ಅವತರಿಸಿ ಬಂದಿದ್ದಾರೆ. ಅವರನ್ನು ಕೇಂದ್ರವಾಗಿರಿಸಿಕೊಂಡು ಈ ಜಗತ್ತಿನಲ್ಲಿ ಇನ್ನೊಮ್ಮೆ ಗಾರ್ಗಿ, ಮೈತ್ರೇಯಿಯರು, ಉದಿಸಿ ಬರಲಿದ್ದಾರೆ. ಪ್ರಿಯ ಸೋದರ, ನಿನಗೆ ಇದೆಲ್ಲ ಈಗ ಸ್ಪಷ್ಟವಾಗಿ ಅರ್ಥವಾಗದಿರಬಹುದು. ಆದರೆ ಕಾಲಕ್ರಮದಲ್ಲಿ ಎಲ್ಲವು ಅರ್ಥವಾಗುತ್ತದೆ... ಆದ್ದರಿಂದ ನಾವು ಮೊಟ್ಟಮೊದಲು ಶ್ರೀಶಾರದಾದೇವಿಯವರ ಹೆಸರಿನಲ್ಲಿ ಒಂದು ಮಠವನ್ನು ಕಟ್ಟಬೇಕು.''

ಶ್ರೀಮಾತೆಯವರ ಅದ್ಭುತ ಜೀವನ, ಅವರ ಪವಿತ್ರತೆ, ಅವರ ನಡತೆ, ಅವರ ಆಧ್ಯಾತ್ಮಿಕ ಅನುಭವದಿಂದ ಹೊರಬಂದ ಉಪದೇಶಗಳು, ಅವರ ವಿಶ್ವವ್ಯಾಪಕ ಪ್ರೀತಿ, ಇವುಗಳು ಹೊಸದಾಗಿ ಸ್ಥಾಪಿಸಲ್ಪಡುವ ಶ್ರೀಮಾತೆಯ ಮಠದ ಸಂನ್ಯಾಸಿನಿಯರಿಗೆ ತಮ್ಮ ಜೀವನವನ್ನು ಉಜ್ವಲಗೊಳಿಸಲು ಸ್ಫೂರ್ತಿದಾಯಕವಾಗುವುದೆಂದು ಸ್ವಾಮೀಜಿ ನಂಬಿದ್ದರು. ಆದರೆ ಈ ಮಠ ಆರಂಭಗೊಳ್ಳಲು ಬಹಳ ವರ್ಷಗಳೇ ಹಿಡಿದವು. ಬಹುಶಃ ಅದಕ್ಕೆ ಕಾರಣವೆಂಬಂತೆ ಸ್ವಾಮಿ ಯೋಗಾನಂದರು ಒಂದು ದಿನ ಗಿರೀಶ್‌ಚಂದ್ರನ ಮುಂದೆ ಸ್ವಾಮೀಜಿಗೆ ಹೀಗೆ ಹೇಳಿದರು, ''ಜಗತ್ತಿನ ಉದ್ಧಾರಕ್ಕಾಗಿ ಏನೇನು ಮಾಡಬೇಕೆಂದಿರುವೆಯೋ ಅದನ್ನು ನೀನು ಮಾಡು. ಆದರೆ ಶ್ರೀಮಾತೆಯವರನ್ನು ಬೋಧಿಸಿ ಜಗತ್ತಿನೆದುರಿಗೆ ತರಲು ಈಗಲೇ ಯತ್ನಿಸಬೇಡ. ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಹೊರಜಗತ್ತಿಗೆ ಪ್ರಚಾರ ಮಾಡಲು ಆರಂಭಿಸಿದಾಗ ತಾವು ತಮ್ಮ ದೇಹತ್ಯಾಗ ಮಾಡುವರೆಂದು ಹೇಳಿದುದು ನಿನಗೆ ನೆನಪಿಲ್ಲವೆ? ಇದು ಶ್ರೀಮಾತೆಯ ವಿಷಯದಲ್ಲೂ ಸತ್ಯವಾಗಬಹುದು.'' ಈ ಸಲಹೆಯನ್ನು ಸ್ವಾಮೀಜಿ ಒಪ್ಪಿಕೊಂಡರು.

ಕೆಲವು ಬಾರಿ ಸ್ವಾಮೀಜಿಗೆ ಶ್ರೀಮಾತೆಯವರು ಶ್ರೀರಾಮಕೃಷ್ಣರ ವಿರಾಟ್‌ರೂಪವಾಗಿಯೇ ತೋರುತ್ತಿದ್ದರು. ಮತ್ತೆ ಕೆಲವು ಸಮಯದಲ್ಲಿ ಅವರು ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ಲೀನವಾಗುತ್ತಿದ್ದಂತೆ ಕಾಣುತ್ತಿದ್ದರು. ಆಗ ಅವರು ಶ್ರೀರಾಮಕೃಷ್ಣಮಯಿಯಾಗಿಯೇ ತೋರುತ್ತಿದ್ದರು. ಅದನ್ನು ಸ್ವಾಮಿ ಶಿವಾನಂದರಿಗೆ ಬರೆದ ಒಂದು ಪತ್ರದಲ್ಲಿ ವ್ಯಕ್ತಪಡಿಸುತ್ತಾರೆ: ''ನನ್ನ ಪಾಲಿಗೆ ಶ್ರೀಮಾತೆಯವರ ಕೃಪೆ ಎಂಬುದು ಶ್ರೀರಾಮಕೃಷ್ಣರ ಕೃಪೆಗಿಂತಲೂ ನೂರು ಸಾವಿರಪಟ್ಟು ಹೆಚ್ಚು ಅಮೂಲ್ಯ. ಮಾತೆಯ ಕೃಪೆ, ಮಾತೆಯ ಆಶೀರ್ವಾದ ಎಲ್ಲವೂ ನನಗೆ ಪರಮೋತ್ಕೃಷ್ಟ. ಸೋದರ, ನೋಡು ನನ್ನ ಹೆಸರು ನಿಜಕ್ಕೂ ವಿವೇಕಾನಂದ ಎಂಬುದೇ ಹೌದಾದಲ್ಲಿ, ನಿಮಗೆ ನಾನು ಜೀವಂತ ದುರ್ಗೆಯನ್ನು ಆರಾಧಿಸಿ ತೋರಿಸುತ್ತೇನೆ. ದಯವಿಟ್ಟು ನನ್ನನ್ನು ಕ್ಷಮಿಸು. ಮಾತೆಯ ವಿಷಯದಲ್ಲಿ ನಾನು ಸ್ವಲ್ಪ ಮತಾಂಧನೇ ಸರಿ... ಇತರ ದೇವತೆಗಳೆಲ್ಲಾ ಏನು ಮಹಾ! ಸೋದರ, ಮಾತೆಯ ಬಗೆಗಿನ ನನ್ನ ಅಭಿಮಾನ ಅಂತಹದು. ರಾಮಕೃಷ್ಣರನ್ನು ನೀನು

ಬೇಕಾದರೆ ಅವತಾರ ಪುರುಷ ಅನ್ನು, ಅಥವಾ ಹೇಗಿಷ್ಟವೋ ಹಾಗೆ ಕರೆದುಕೋ. ಆದರೆ ಶ್ರೀಮಾತೆಯವರ ಬಗ್ಗೆ ಯಾರಿಗೆ ಭಕ್ತಿ ಎಂಬುದಿಲ್ಲವೋ ಅವನಿಗೆ ಧಿಕ್ಕಾರ!''

ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶದಿಂದ ಹಿಂದಿರುಗಿದ ಮೇಲೆ ಕಾಶ್ಮೀರಕ್ಕೆ ಭೇಟಿ ಕೊಟ್ಟಾಗ ಒಂದು ಘಟನೆ ನಡೆಯಿತು. ಒಬ್ಬ ಫಕೀರ ಗುರುವಿನ ಶಿಷ್ಯನೊಬ್ಬ ಸ್ವಾಮೀಜಿಯ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಸ್ವಾಮೀಜಿ ಬಳಿಗೆ ಹೆಚ್ಚು ಬರುತ್ತಿದ್ದ. ಈ ವಿಷಯ ವನ್ನು ತಿಳಿದ ಅವನ ಫಕೀರ ಗುರುವಿಗೆ ಸ್ವಾಮೀಜಿಯ ಮೇಲೆ ಹೊಟ್ಟೆಯುರಿ ಉಂಟಾಯಿತು. ಕೋಪದಿಂದ ಒಂದು ದಿನ ಸ್ವಾಮೀಜಿ ಕಾಶ್ಮೀರ ಬಿಡುವ ಮುನ್ನ ತಲೆ ತಿರುಗಿ ವಾಂತಿ ಮಾಡಿ ಕೊಳ್ಳುತ್ತಾರೆ ಎಂದು ಶಾಪ ಹಾಕಿದ. ಅದು ಹಾಗೆಯೇ ನಡೆದು ಹೋಯಿತು ಕೂಡ. ಇದರಿಂದ ಸ್ವಾಮೀಜಿ ತೀವ್ರ ಮಾನಸಿಕ ಕ್ಷೋಭೆ ಹಾಗೂ ಆವೇಗಕ್ಕೊಳಗಾದರು. ಕಲ್ಕತ್ತೆಗೆ ಹಿಂದಿರುಗಿದ ಮೇಲೆ ಶ್ರೀಮಾತೆ ಶಾರದಾದೇವಿಯವರ ಬಳಿಗೆ ಹೋಗಿ, ದೂರುವ ಧ್ವನಿಯಲ್ಲಿ ಸ್ವಾಮೀಜಿ ಹೇಳಿದರು: ''ಏನಮ್ಮಾ ನನಗೆ ಹೀಗೆಲ್ಲಾ ಆಯಿತಲ್ಲ, ನಮ್ಮ ಶ್ರೀರಾಮಕೃಷ್ಣರು ಅದನ್ನು ತಡೆಯ ಬಾರದಿತ್ತೆ?'' ಶ್ರೀಮಾತೆಯವರು ಅವರನ್ನು ಸಂತೈಸುತ್ತಾ ನುಡಿ ದರು, ''ಏನು ಮಾಡುವುದಪ್ಪಾ? ಜಗತ್ತಿನಲ್ಲಿ ನಿಜವಾದ ಆಧ್ಯಾತ್ಮಿ ಕತೆಯಿರುವಂತೆಯೇ ಮಾಯಾಮಂತ್ರಗಳೂ ಇವೆ. ಅಷ್ಟೇ ಅಲ್ಲದೆ ಅವರೂ ಕೂಡ ಸಾಧನೆ ಮಾಡಿ ಗಳಿಸಿದ್ದೇ ಅಲ್ಲವೇ ಆ ಶಕ್ತಿ? ಅದು ವ್ಯರ್ಥವಾಗಬೇಕೆಂದರೆ ಹೇಗೆ ಸಾಧ್ಯ? ಹಿಂದೆ ಶ್ರೀರಾಮಕೃಷ್ಣರಿಗೆ ಹಲಧಾರಿ, 'ನೀನು ರಕ್ತ ಕಾರುವಂತಾಗಲಿ' ಎಂದು ಶಪಿಸಿದ್ದ. ಅದು ನಿಜಕ್ಕೂ ಹಾಗೆಯೇ ಆಗಿಹೋಯಿತು.'' ಆದರೆ ಈ ಉತ್ತರದಿಂದ ಸ್ವಾಮೀಜಿಯವರಿಗೇನೂ ಸಂಪೂರ್ಣ ಸಮಾಧಾನ ವಾಗಲಿಲ್ಲ. ಮುನಿಸಿಕೊಂಡ ಬಾಲಕ ತಾಯಿಯ ಮುಂದೆ ಹಠ ಮಾಡುವಂತೆ ಹೇಳಿದರು, ''ಒಟ್ಟಿನಲ್ಲಿ ನಿಮ್ಮ ರಾಮಕೃಷ್ಣರ ಕೈಯಲ್ಲಿ ಏನೂ ಆಗಲಿಲ್ಲ. ಹೋಗಲಿ, ನನಗೆ ಅವರ ಸಹವಾಸವೇ ಬೇಡ!'' ಇದನ್ನು ಕೇಳಿ ಶ್ರೀಮಾತೆಯವರಿಗೆ ನಗು ಬಂತು. ಅವ ರೆಂದರು, ''ಮಗೂ, ನೀನು ಏನೇ ಹೇಳಿದರೂ, ನಿನ್ನ ಜುಟ್ಟು ಅವರ ಕೈಯಲ್ಲಿ ಭದ್ರವಾಗಿದೆಯಲ್ಲ! ಏನು ಮಾಡುವುದು?''

೧೮೯೮ರಲ್ಲಿ ಕಲ್ಕತ್ತಾ ನಗರದಲ್ಲಿ ಪ್ಲೇಗ್ ರೋಗ ಭೀಷಣಾ ಕಾರವನ್ನು ತಾಳಿದೆ ಎಂಬ ಸುದ್ದಿ ಅವರ ಕಿವಿಗೆ ಬಿದ್ದಿತು. ಸ್ವಾಮಿ ಗಳು ದಾರ್ಜಿಲಿಂಗ್‌ನಿಂದ ಬೇಲೂರು ಮಠಕ್ಕೆ ಹಿಂದಿರುಗಿ ಬಂದು ತರುಣ ಸನ್ಯಾಸಿಗಳು ಮತ್ತು ಬ್ರಹ್ಮಚಾರಿಗಳಿಗೆ ರೋಗಿಗಳ ಸೇವಾ ಕಾರ್ಯವನ್ನು ಆರಂಭಿಸಲು ಹೇಳಿದರು.

ಅದನ್ನು ಕೇಳಿ ಸೋದರ ಸನ್ಯಾಸಿಗಳೊಬ್ಬರು, ''ಸ್ವಾಮೀಜಿ, ಸೇವಾಕಾರ್ಯಕ್ಕೆ ಹಣ ಬರುವುದೆಲ್ಲಿಂದ?'' ಎಂದು ಕೇಳಿದರು. ಸ್ವಾಮೀಜಿ ಸ್ವಲ್ಪವೂ ತಡವರಿಸದೆ, ''ಎಲ್ಲಿಂದ? ಅದೇಕೆ? ಆವಶ್ಯ ಕತೆ ಬಿದ್ದರೆ ಹೊಸದಾಗಿ ಕೊಂಡುಕೊಂಡ ಮಠದ ಭೂಮಿಯನ್ನೇ ಮಾರುವುದು. ಸಾವಿರಾರು ಜನರು ನಮ್ಮ ಕಣ್ಣ ಮುಂದೆಯೇ ನರಳುವಾಗ ನಮಗೆ ಮಠದಲ್ಲಿ ಸುಖವಾಸವೆ? ಮರದಡಿಯಲ್ಲಿ ಮಲಗಿ ಭಿಕ್ಷೆಯಿಂದ ಹೊಟ್ಟೆ ತುಂಬಿಸಿಕೊಳ್ಳೋಣ'' ಎಂದರು.

ಆ ಮಾತನ್ನು ಕೇಳಿ ಎಲ್ಲರೂ ಬೆಚ್ಚಿಬಿದ್ದರು. ಅವರು ಒಮ್ಮೆ ಏನಾದರೂ ಹೇಳಿದರೆ ಅದು ತೀರ್ಮಾನವೇ. ಆದರೂ ಸ್ವಾಮಿ ಶಿವಾನಂದರು ಹೇಳಿದರು, ''ನರೇನ್, ನೀನು ಮುಖ್ಯವಾದ ವಿಷಯಗಳನ್ನು ಶ್ರೀಮಾತೆಯವರೊಡನೆ ಆಲೋಚಿಸುವೆಯಲ್ಲ. ಮಠದ ನೆಲವನ್ನು ಮಾರುವ ಮುಂಚೆ ಒಮ್ಮೆ ಅವರ ಸಲಹೆ ಪಡೆಯಬಾರದೆ?''

ಸ್ವಾಮೀಜಿ ತಕ್ಷಣ ಹೇಳಿದರು, ''ನೀನು ಹೇಳುವುದು ಸರಿ, ತಾರಕ, ನಾನು ತಪ್ಪು ಮಾಡಿದೆ. ಇಂದೇ ಶ್ರೀಮಾತೆಯ ಬಳಿಗೆ ಹೋಗಿ ಅವರ ಸಲಹೆ ಪಡೆಯೋಣ.''

ಸ್ವಾಮೀಜಿ ಅಂದು ಸಂಜೆಯೇ ಸ್ವಾಮಿ ಬ್ರಹ್ಮಾನಂದರು ಹಾಗೂ ಶಾರದಾನಂದರೊಡನೆ ಶ್ರೀಮಾತೆಯವರನ್ನು ಕಾಣಲು ಹೋದರು. ಶ್ರೀಮಾತೆಗೆ ಸಾಷ್ಟಾಂಗ ಪ್ರಣಾಮ ಮಾಡಿ ಹೇಳಿ ದರು, ''ಅಮ್ಮಾ, ಪ್ಲೇಗ್ ರೋಗ ಭೀಷಣಾಕಾರ ತಾಳಿದೆ. ಆ ರೋಗಿಗಳಿಗೆ ಸಹಾಯ ಮಾಡಲು, ಸೇವೆ ಮಾಡಲು ನಮ್ಮ ಬಳಿ ಹಣವಿಲ್ಲ. ಮಠದ ನೆಲವನ್ನು ಮಾರಿಬಿಡೋಣ ಎಂದು ಯೋಚಿಸುತ್ತಿದ್ದೇನೆ. ನಾವು ಸಂನ್ಯಾಸಿಗಳು. ಮರದ ಕೆಳಗೂ ವಾಸಿಸಬಲ್ಲೆವು. ನಿಮ್ಮ ಅಪ್ಪಣೆ ಬೇಕು'' ಎಂದರು.

ಸ್ವಾಮೀಜಿಯವರ ಎಲ್ಲ ಯೋಜನೆಗಳನ್ನೂ ಸಾಧಾರಣವಾಗಿ ಶ್ರೀಮಾತೆ ಅನುಮೋದಿಸುತ್ತಿದ್ದರು. ಆದರೆ ಈ ವಿಷಯದಲ್ಲಿ ತಮ್ಮ ಸಮ್ಮತಿ ನೀಡಲಿಲ್ಲ. ಅವರು ಹೇಳಿದರು, ''ನೋಡು ಮಗು, ಆ ಜಮೀನನ್ನು ನೀನು ಮಾರಲಾಗುವುದಿಲ್ಲ. ಅದು ನಿನ್ನ ದಲ್ಲ. ಅದು ಶ್ರೀರಾಮಕೃಷ್ಣರಿಗೆ ಸೇರಿದ್ದು. ನೀವೆಲ್ಲಾ ನನ್ನ ಧೈರ್ಯಶಾಲಿ ಮಕ್ಕಳು, ನಿಜ. ಮರದ ಕೆಳಗೆ ಆನಂದದಿಂದಲೇ ಕಾಲಕಳೆಯುವಿರಿ, ಅದೂ ನನಗೆ ಗೊತ್ತು. ಆದರೆ ಮುಂದೆ ಬರುವ ನನ್ನ ಮಕ್ಕಳು ಅಂತಹ ಕಠೋರ ಜೀವನವನ್ನು ನಡೆಸ ಲಾರರು. ಈ ಮಠ ಅವರಿಗಾಗಿ... ನೀನು ಆರಂಭಿಸಿರುವ ಬೇಲೂರು ಮಠ ಬರಿಯ ಪರಿಹಾರ ಕಾರ್ಯದೊಡನೆ ಮುಗಿಯ ಬೇಕೆ? ಗುರುದೇವರ ಯೋಜನೆಗಳು ಅನಂತವಾದವು. ಅವರ ಹಲವಾರು ಸಂದೇಶಗಳನ್ನು ಈ ಮಠದ ಮೂಲಕ ಪ್ರಪಂಚ ದಲ್ಲೆಲ್ಲಾ ಹರಡಬೇಕಾಗಿದೆ. ಅವರ ಕಾರ್ಯ ಬಹಳ ಕಾಲದವರೆಗೆ ಮುಂದುವರಿಯುತ್ತದೆ.'' ಸ್ವಾಮೀಜಿ ಶ್ರೀಮಾತೆಯ ಮಾತಿ ನಲ್ಲಿದ್ದ ಸತ್ಯವನ್ನು ತಕ್ಷಣ ಮನಗಂಡರು.

ಮಠದ ಆಡಳಿತದ ಸಂಬಂಧದಲ್ಲಿ ಶ್ರೀಮಾತೆಯವರ ಮಾತು ಆದೇಶವಾಗಿ ಸ್ವೀಕರಿಸಲ್ಪಡುತ್ತಿತ್ತು.

ಒಮ್ಮೆ ಬೇಲೂರು ಮಠದ ಕೆಲಸಗಾರನೊಬ್ಬ ಏನನ್ನೋ ಕದ್ದ. ಇದು ಸ್ವಾಮೀಜಿ ಗಮನಕ್ಕೆ ಬಂದಿತು. ತಕ್ಷಣ ಅವನನ್ನು ಕೆಲಸ ದಿಂದ ತೆಗೆದು ಹಾಕಿದರು. ಆತ ಕಡುಬಡವ. ಅವನ ಸಂಸಾರ

ಅವನ ಆದಾಯದ ಮೇಲೆ ನಿಂತಿತ್ತು. ಆತ ಏನೂ ತೋಚದೆ ಶ್ರೀಮಾತೆಯ ಬಳಿ ಓಡಿದ. ಶ್ರೀಮಾತೆ ಅವನ ಕಥೆಯನ್ನೆಲ್ಲಾ ಕೇಳಿ ಉದ್ಬೋಧನದಲ್ಲೇ ಇರಲು ತಿಳಿಸಿದರು. ಅದೇ ದಿನ ಸಾಯಂಕಾಲ ಸ್ವಾಮಿ ಪ್ರೇಮಾನಂದರು ಕಾರ್ಯಾರ್ಥವಾಗಿ ಉದ್ಬೋಧನಕ್ಕೆ ಬಂದರು. ಆಗ ಶ್ರೀಮಾತೆಯವರು ಪ್ರೇಮಾನಂದರಿಗೆ ಹೇಳಿದರು: ''ನೋಡಪ್ಪಾ, ಬಾಬುರಾಮ್, ಈ ಮನುಷ್ಯ ಬಹಳ ಬಡವ. ಇವನು ಕದಿಯುವುದಕ್ಕೆ ಇವನ ಬಡತನವೇ ಕಾರಣ. ಇಷ್ಟಕ್ಕೆಲ್ಲಾ ನರೇನ್ ಇವನನ್ನು ಬೈದು ಕಳುಹಿಸಿಬಿಡುವುದೆ! ಪ್ರಪಂಚ ಬಹಳ ಕಷ್ಟ. ನೀವೆಲ್ಲಾ ಸಂನ್ಯಾಸಿಗಳು. ನಿಮಗೆ ಆ ಕಷ್ಟವೆಲ್ಲಾ ಗೊತ್ತಾಗುವುದಿಲ್ಲ. ಕರೆದುಕೊಂಡು ಹೋಗು ಅವನನ್ನು.'' ಆದರೆ ತಾವು ಹಾಗೆ ಕರೆದುಕೊಂಡು ಹೋದರೆ ಸ್ವಾಮೀಜಿ ಬೇಸರಿಸಿಕೊಳ್ಳುತ್ತಾರೆ ಎಂಬ ಅಂಶವನ್ನು ಶ್ರೀಮಾತೆಗೆ ಮನಗಾಣಿಸಲು ಪ್ರೇಮಾನಂದರು ಯತ್ನಿಸಿದರು. ಆಗ ಶ್ರೀಮಾತೆ ಅಧಿಕಾರವಾಣಿಯಿಂದ ಹೇಳಿದರು: ''ನಾನು ಹೇಳುತ್ತಿದ್ದೇನೆ. ಕರೆದುಕೊಂಡು ಹೋಗು.'' ಬೇರೆ ಮಾರ್ಗವಿಲ್ಲದೆ ಪ್ರೇಮಾನಂದರು ಅವನನ್ನು ಕರೆದುಕೊಂಡು ಹೋದರು. ಮಠದಲ್ಲಿ ದೂರದಿಂದಲೇ ಸ್ವಾಮೀಜಿ ಇವರಿಬ್ಬರನ್ನು ನೋಡಿ ಅಬ್ಬರಿಸಿದರು, ''ನೋಡು, ಬಾಬುರಾಮನ ಅವಿವೇಕವನ್ನು. ಆ ಮೂರ್ಖನನ್ನು ಮತ್ತೆ ಕರೆದುಕೊಂಡು ಬರುತ್ತಿದ್ದಾನಲ್ಲ.'' ಪ್ರೇಮಾನಂದರು ಸ್ವಾಮೀಜಿಗೆ ನಡೆದುದೆಲ್ಲವನ್ನೂ ವಿವರಿಸಿದ ಮೇಲೆ ಸ್ವಾಮೀಜಿ ಒಂದು ಮಾತೂ ಆಡದೆ ಮೌನವಾಗಿಬಿಟ್ಟರು.

ಒಮ್ಮೆ ಸ್ವಾಮೀಜಿ ಮತ್ತು ತುರೀಯಾನಂದರು ಶ್ರೀಮಾತೆಯವರನ್ನು ಭೇಟಿ ಮಾಡಲು ಬೇಲೂರು ಮಠದಿಂದ ಕಲ್ಕತ್ತೆಗೆ ದೋಣಿಯಲ್ಲಿ ಹೊರಟರು. ಸ್ವಾಮೀಜಿ ಗಂಗಾನದಿಯ ನೀರನ್ನು ಬೊಗಸೆ ಬೊಗಸೆಯಾಗಿ ಎತ್ತಿ ತಮ್ಮ ದೇಹದ ಮೇಲೆ ಚಿಮುಕಿಸಿಕೊಳ್ಳುತ್ತಿದ್ದರು. ಇದನ್ನು ನೋಡಿದ ತುರೀಯಾನಂದರು, ''ಇದೇನು ಮಾಡುತ್ತಿದ್ದೀ? ಹೀಗೆ ಮಾಡುತ್ತಿದ್ದರೆ ಶೀತವಾಗಿಬಿಡುತ್ತದೆ'' ಎಂದರು.

ಅದಕ್ಕೆ ಸ್ವಾಮೀಜಿ, ''ಇಲ್ಲ, ಸಹೋದರ, ನನ್ನ ದೇಹ ಮತ್ತು ಮನಸ್ಸನ್ನು ಶುದ್ಧಗೊಳಿಸಿಕೊಳ್ಳುತ್ತಿದ್ದೇನೆ. ಹಲವಾರು ದೇಶಗಳನ್ನು ಸುತ್ತಿ ಎಲ್ಲರೊಡನೆ ಬೆರೆತು ಅಶುದ್ಧವಾಗಿಬಿಟ್ಟಿದ್ದೇನೆ. ಹೀಗೇ ಹೋದರೆ ಶ್ರೀಮಾತೆಯವರು ನನ್ನೆಲ್ಲಾ ಪಾಪಗಳನ್ನು ತೆಗೆದುಕೊಂಡು, ತಾವು ಕಷ್ಟ ಅನುಭವಿಸುತ್ತಾರೆ'' ಎಂದರು.

ಸ್ವಾಮಿ ವಿವೇಕಾನಂದರು ೪ ಜುಲೈ ೧೯೦೨ರಲ್ಲಿ ಬೇಲೂರು ಮಠದಲ್ಲಿ ದೇಹತ್ಯಾಗ ಮಾಡಿದಾಗ ಶ್ರೀಮಾತೆಯವರು ಜಯರಾಂಬಾಟಿಯಲ್ಲಿದ್ದರು. ವಿಷಯ ತಿಳಿದ ಮೇಲೆ ಅವರು ಮೌನಿಗಳಾಗಿ ಮೂರು ದಿನ ಸತತವಾಗಿ ಅಳುತ್ತಾ ಗೋಳಾಡುತ್ತಿದ್ದರು. ಶ್ರೀರಾಮಕೃಷ್ಣರನ್ನು ಉದ್ದೇಶಿಸಿ ಕಂಬನಿಗರೆಯುತ್ತಾ ಹೇಳಿದರು: ''ಸ್ವಾಮಿ, ನನ್ನ ಮಕ್ಕಳ ನಿರ್ಗಮನದ ದುಃಖವನ್ನನುಭವಿಸಲು ನನ್ನನ್ನು ಇನ್ನೂ ಬದುಕಿ ಉಳಿಸಿದ್ದೀರಾ?''

ಸ್ವಾಮೀಜಿಯನ್ನು ನೆನೆಪಿಸಿಕೊಂಡಾಗಲೆಲ್ಲಾ ಹೇಳುತ್ತಿದ್ದರು, ''ಗುರುದೇವರು ಹೇಳುತ್ತಿದ್ದರು, 'ನರೇನ್, ನನ್ನ ಶಿರೋರತ್ನ. ಅವನಲ್ಲಿ ಎರಡು ದುರದೃಷ್ಟಗಳಿದ್ದವು. ಅವನು ಬಿರುಸಾಗಿ ಉದ್ದವಾಗಿ ಉಸಿರಾಡುತ್ತಿದ್ದ ಹಾಗೂ ಸಾಧಾರಣ ವ್ಯಕ್ತಿಗಳಿಗಿಂತ ಸ್ವಲ್ಪ ಜಾಸ್ತಿ ತಿನ್ನುತ್ತಿದ್ದ. ಇವೆರಡೂ ಅವನು ಬಹಳ ಕಾಲ ಬದುಕಿರುವುದಿಲ್ಲವೆನ್ನುವುದರ ಚಿಹ್ನೆ.' ''

ಒಮ್ಮೆ ಶ್ರೀಮಾತೆಯವರಿಗೆ ಸ್ವಾಮೀಜಿ ಹೇಳಿದರು, ''ಅಮ್ಮಾ, ನನಗೆ ಚೆನ್ನಾಗಿ ಗೊತ್ತು. ನಿಮ್ಮ ಆಶೀರ್ವಾದದಿಂದ ಬೇಕಾದಷ್ಟು ನರೇಂದ್ರರು ಹುಟ್ಟುತ್ತಾರೆ ಮತ್ತು ಸಾವಿರಾರು ವಿವೇಕಾನಂದರು ಉದ್ಭವಿಸುತ್ತಾರೆ. ಅಲ್ಲದೆ ನನಗೆ ಇದೂ ಖಚಿತವಾಗಿ ಗೊತ್ತು, ಈ ಪ್ರಪಂಚದಲ್ಲಿ ನಿನ್ನಂತಹ ತಾಯಿ ಒಬ್ಬಳೇ ಒಬ್ಬಳು.''



## ಡಾ. ರಾಧಾಕೃಷ್ಣನ್ ಮತ್ತು ಸ್ವಾಮಿ ಆತ್ಮಸ್ಥಾನಂದಜಿ

ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ರಾಮಕೃಷ್ಣ ಮಹಾಸಂಘವನ್ನು ಸೇರುವುದಕ್ಕೆ ಮೊದಲು, ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಎಂ.ಎ. ಪದವಿಗಾಗಿ ಓದುತ್ತಿದ್ದರು. ಅವರಿಗೆ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಪ್ರಾಧ್ಯಾಪಕರಾಗಿದ್ದರು. ಬಹಳ ವರ್ಷಗಳ ನಂತರ ಅವರಿಬ್ಬರೂ ಒಂದೆಡೆ ಭೇಟಿಯಾಗುವ ಪ್ರಸಂಗ ಒದಗಿ ಬಂತು. ಸ್ವಾಮೀಜಿಯವರನ್ನು ಕಂಡ ಕೂಡಲೇ ರಾಧಾಕೃಷ್ಣನ್ ಎದ್ದು ನಿಂತರು. ತುಂಬಾ ಹಿಂದೆ ಶಿಷ್ಯನಾಗಿದ್ದ ತಮ್ಮನ್ನು ಖಂಡಿತ ಅವರು ಗುರುತಿಸಲಾರರು ಎಂದೇ ಸ್ವಾಮೀಜಿ ಭಾವಿಸಿದ್ದರು. ಅವರು ತಮ್ಮನ್ನು ತಾವು ಪರಿಚಯಿಸಿಕೊಂಡಾಗ ರಾಧಾಕೃಷ್ಣನ್, ''ನನಗೆ ನಿಮ್ಮನ್ನು ಚೆನ್ನಾಗಿ ನೆನಪಿದೆ'' ಎಂದರು. ಆಗ ಮಹಾರಾಜ್, ''ಹಾಗಿದ್ದರೆ ಮತ್ತೆ ನೀವೇಕೆ ಎದ್ದು ನಿಂತಿರಿ? ನೀವು ನನ್ನ ಅಧ್ಯಾಪಕರು, ನನಗೆ ಗುರುವಲ್ಲವೆ?'' ಎಂದು ಕೇಳಿದರು. ಆಗ ರಾಧಾಕೃಷ್ಣನ್, ''ನೀವು ಶಿಷ್ಯನಾಗಿದ್ದಾಗ ನಾನು ನಿಮ್ಮ ಗುರುವಾಗಿದ್ದೆ, ನಿಮಗೆ ಅಧ್ಯಾಪಕನಾಗಿದ್ದೆ. ಆದರೆ ಈಗ ನೀವು ಸಂನ್ಯಾಸಿಗಳು, ಜಗದ್ಗುರುಗಳು'' ಎಂದರು.

*(ಸಂಗ್ರಹ: 'ಸ್ವಾಮಿ ಆತ್ಮಸ್ಥಾನಂದ' ಸಂಕ್ಷಿಪ್ತ ಜೀವನ ಚರಿತ್ರೆ)*